ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೧೪ನೇ ಜೂನ್ ೧೯೯೦, ಜ್ಯೇಷ್ಠ ೨೪, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು]

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ವರುಣ ನಾಲೆಗೆ ಬಿಡುಗಡೆ ಮಾಡಿದ ಹಣದ ಬಗ್ಗೆ

೫೧೮. ಶ್ರೀ ಕೆ. ಎಂ. ಪುಟ್ಟು (ಕಿರುಗಾವಲು).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸ್ತುತ ಆಯವ್ಯಯದಲ್ಲಿ ವರುಣ ನಾಲೆಯ ಮಾಡ್ರೇಷನ್ ಲಿಂಕ್ ಚಾನಲ್‌ಗಾಗಿ ಹಂಚಿಕೆ ಮಾಡಲಾಗಿರುವ ಮೊತ್ತವೆಷ್ಟು?

ಆ) ಈ ಹಂಚಿಕೆ ಹಣವನ್ನು ಸಂಬಂಧಪಟ್ಟ ಕಛೇರಿಗಳಿಗೆ ಬಿಡುಗಡೆ ಮಾಡಲು ಉದ್ದೇಶಿಸಿದೆಯೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ. (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೯೦-೯೧ನೇ ಸಾಲಿನಲ್ಲಿ ವರುಣಾ ನಾಲೆಗೆ ೫೦೦ ಲಕ್ಷ ರೂಗಳ ಹಾಗೂ ಕೃಷ್ಣರಾಜಸಾಗರದ ನಾಲೆಯ ಆಧುನೀಕರಣ ಕೆಲಸಗಳಿಗೆ ೧೦೦ ಲಕ್ಷ ರೂಗಳ ಅನುದಾನ ಒದಗಿಸಲಾಗಿದೆ.

ಆ) ಉದ್ದೇಶಿಸಿದೆ ಹಾಗೂ ವಿವಿಧ ಕಛೇರಿಗಳಿಗೆ ವಿತರಣೆ ಮಾಡಲಾಗಿದೆ.

ಇ) ರಾಜ್ಯದ ಹಣಸಂಪನ್ಮೂಲವನ್ನನುಸರಿಸಿ, ಕಾಮಗಾರಿಗಳ ಪ್ರಗತಿಯನ್ನು ಹಾಗೂ ನೀಡಲಾದ ಅನುದಾನವನ್ನನುಸರಿಸಿ ಪ್ರತ್ಯೇಯ ಪತ್ರ (ಎಲ್. ಒ. ಸಿ.) ಬಿಡುಗಡೆ ಮಾಡಲಾಗುವುದು.

ಶ್ರೀ ಕೆ. ಎಂ. ಪುಟ್ಟು.—ಅಧ್ಯಕ್ಷರೇ, ವರುಣಾ ನಾಲೆ ಮತ್ತು ಮಂಡ್ಯ ವಿಸಿ ಲಿಂಕ್ ಚಾನಲ್, ಏನಿದೆ, ಅದರ ಬಗ್ಗೆ ಒಟ್ಟಲ್ಲಿ ಒಂದು ಐತಿಹಾಸಿಕವಾದ ಹೋರಾಟ ನಡೆದು ಯಾವ ನಾಲೆಯನ್ನು ಮೊದಲು ತೆಗೆದುಕೊಳ್ಳಬೇಕು ಮತ್ತು ಎಷ್ಟೆಷ್ಟು ಹಣ ತಲಾ ಖರ್ಚು ಮಾಡಬೇಕೆಂದು ಸರ್ಕಾರ ಆರ್ಡರ್‌ಮಾಡಿತು. ಆದರೆ ಅನಂತರ ಎಲ್ಲ ಆಯವ್ಯಯದಲ್ಲೂ ಮಂಡ್ಯ ಲಿಂಕ್ ಚಾನಲ್‌ಗೆ ಕಡಿಮೆ ಹಣ ಕೊಡುತ್ತಿದ್ದಾರೆ. ವರುಣಾ ನಾಲೆಗೆ ಜಾಸ್ತಿ ಕೊಡುತ್ತಿದ್ದಾರೆ. ಆದರೆ ಸರ್ಕಾರಿ ಆಜ್ಞೆಯಲ್ಲಿ ಮೊದಲು ಲಿಂಕ್ ಚಾನಲ್ ಮುಗಿಸಬೇಕೆಂದು ಇದೆ. ಆದರ ಹೋದವರ್ಷ ೨ ಕೋಟಿ ಚಿಲ್ಲರೆ ಕಡಿಮೆ ಕೊಟ್ಟಿದ್ದಾರೆ. ಈ ವರ್ಷ ೬ ಕೋಟಿ ಚಿಲ್ಲರೆ ಕಡಿಮೆಕೊಟ್ಟಿದ್ದಾರೆ. ಆದರ ಬಗ್ಗೆ ಹಣಕಾಸಿನ ಸಚಿವರು ಮತ್ತು ನೀರಾವರಿಸಚಿವರ ಗಮನಕ್ಕೆ ಇದನ್ನು ತಂದೆ ಆದರೂ ಬಜೆಟ್ ಕಳೆದು ಮೂರು ತಿಂಗಳಾದರೂ ಕೂಡ ಅವರ ಪ್ರತಿಕ್ರಿಯೆ ಗೊತ್ತಾಗಲಿಲ್ಲ. ಸರ್ಕಾರದ ಆಜ್ಞೆ ಏನಿದೆ ಅದಕ್ಕೆ ವಿರುದ್ಧವಾಗಿ ಈ ಸಲದ ಆಯವ್ಯಯದಲ್ಲಿ ಮಂಡ್ಯ ನಾಲೆಗೆ ಬರೀ ೧ ಕೋಟಿ ಕೊಟ್ಟಿದ್ದಾರೆ. ಆದರಲ್ಲಿ ೮೦ ಲಕ್ಷ ಬರೀ ಎಸ್ಟಾಬ್ಲಿಷ್ ಮೆಂಟ್ ಹೋಗಿ ೨೦ ಲಕ್ಷ ದಲ್ಲಿ ಗುಣಮಟ್ಟವಲ್ಲದ ಕೆಲಸ ನಡೆಯುತ್ತದೆ ಆದ್ದರಿಂದ ಇದರ ಬಗ್ಗೆ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ. ಮುಖ್ಯವಾಗಿ ಹಣ ಕಡಿಮೆ ಕೊಡಲು ಕಾರಣವೇನೆಂದು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ವಿ. ಸಿ. ಕೆನಾಲ್ ಆಧುನೀಕರಣಕ್ಕಾಗಿ ೫ ಕೋಟಿ ೫೦ ಲಕ್ಷ ರೂಪಾಯಿಗಳ ಅಂದಾಜನ್ನು ತಯಾರು ಮಾಡಿ ಈ ವರ್ಷ ಅದಕ್ಕೆ ೧ ಕೋಟಿ ರೂಪಾಯಿ ಅನುದಾನವನ್ನು ಕೊಟ್ಟಿದ್ದಾರೆ ೫ ಸಬ್ ಡಿವಿಜನ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಹೇಳಿದ ಹಾಗೆ ಕೊಟ್ಟಿರತಕ್ಕಂಥ ಹಣ ಅಲ್ಲಿಯ ಸಿಬ್ಬಂದಿ ವೆಚ್ಚಕ್ಕೆ ಮತ್ತು ಬೇರೆ ಬಾಬಿಗೆ ಖರ್ಚಾಗುತ್ತಿದೆ ಎನ್ನತಕ್ಕಂಥದ್ದನ್ನು ನಾನು ಕೂಡಾ ತಿಳಿದುಕೊಂಡಿದ್ದೇನೆ. ಆದರೂ ಕೂಡಾ ಇತ್ತೀಚೆಗೆ ಅಂದರೆ ಮೊನ್ನೆ ೨.೬೨ ಕೋಟಿ ರೂಪಾಯಿಯ ಟೆಂಡರನ್ನು ಕಮಿಟ್‌ಮೆಂಟ್ ಮಾಡಿ ಅದನ್ನು ಅಪ್ರೂವ್ ಮಾಡಿದ್ದೇವೆ. ಈಗ ಇದಕ್ಕೆ ಮೂವರಿಂದ ನಾಲ್ಕು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಎನ್ನತಕ್ಕಂಥದ್ದನ್ನು ನಾವು ನಿರೀಕ್ಷೆ ಮಾಡಿದ್ದೇವೆ. ಇದರ ಬಗ್ಗೆ ಆರ್ಥಿಕ ಇಲಾಖೆಯ ಜೊತೆ ವ್ಯವಹಾರ ಕೂಡಾ ಮಾಡಿದ್ದೇವೆ ಶೀಘ್ರದಲ್ಲಿಯೇ ಇದನ್ನು ಅಪ್ರೋಪ್ರಿಯೇಷನ್ ಮಾಡುವ ಮೂಲಕ ಈ ಕಾರ್ಯವನ್ನು ನಾವು ಪ್ರಾರಂಭ ಮಾಡುತ್ತೇವೆ ಮತ್ತು ವರುಣಾ ಮತ್ತು ದೇವರಾಜಅರಸ್ ಕೆನಾಲ್ ಈ ಎರಡನ್ನು ಕೂಡಾ ಸೈಮಲ್ಟೇನಿಯಸ್ ಆಗಿ ಮಾಡತಕ್ಕಂಥ ಪ್ರಯತ್ನವನ್ನು ನಾವು ಮಾಡಿದ್ದೇವೆ. ಇದರಲ್ಲಿ ಯಾವುದೇ ವಿವಾದಾಂಥ ಪಕ್ಷಪಾತ ಇಲ್ಲ ಮತ್ತು ತಾರತಮ್ಯವಿಲ್ಲ ಎನ್ನುವ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಕೆ. ಎಂ. ಪುಟ್ಟು.—ಈಗಾಗಲೇ ವರುಣಾ ನಾಲಾ ಮತ್ತು ಲಿಂಕ್ ಚಾನಲ್ ಕೆಲಸವನ್ನು ಇಲ್ಲಿ ಕೊಟ್ಟಿರುವ ಅಂಕಿಅಂಶಗಳಮೂಲಕ ನೋಡಿದಾಗ ತಾರತಮ್ಯವಾಗಿದೆ ಎಂದು ನನ್ನ ಗನ್ನಿಸುತ್ತದೆ. ಈಗಾಗಲೇ ಅಲ್ಲಿಗೆ ಏಳು ಕೋಟಿ ರೂಪಾಯಿ ಚಿಲ್ಲರೆ ಕೊಟ್ಟಿದ್ದಾರೆ. ನವುಗೆ ಮಾತ್ರ ಬಂದು ಕೋಟಿ ರೂಪಾಯಿಯನ್ನು ಕೊಟ್ಟಿದ್ದಾರೆ. ಇಲ್ಲಿ ಸಚಿವರು ಏನೂ ತಾರತಮ್ಯ ಇಲ್ಲ ಎಂದು ಹೇಳಿದ್ದಾರೆ. ಇನ್ನೂ ಆರು ಕೋಟಿ ರೂಪಾಯಿಯನ್ನು ನಮಗೂ ಕೂಡಾ ಬಿಡುಗಡೆ ಮಾಡುತ್ತೇವೆ ಎಂದು ಸಚಿವರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ನೀವು ಉತ್ತರ ಕೊಡಲಿಲ್ಲ. ಅಗ್ರಿಮೆಂಟ್ ಪ್ರಕಾರ ಲಿಂಕ್ ಕೆನಾಲ್ ಕೆಲಸ ಮೊದಲು ಆಗಬೇಕಾಗಿತ್ತು ಅದನ್ನು ಮೊದಲು ಮಂಗಿಸಬೇಕು ಎನ್ನುವುದು ೧೯೭೭ನೇ ಇಸವಿಯಲ್ಲಿಯೇ ತೀರ್ಮಾನವಾಗಿತ್ತು ಎಂದು ಹೇಳಿದರು ಅದಕ್ಕೆ ತಾವು ಉತ್ತರ ಕೊಡಲಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಆ ಅಗ್ರಿಮೆಂಟನ್ನು ನೋಡಿಲ್ಲ. ಈ ಪ್ರಶ್ನೆಗೆ ಸೀಮಿತವಾಗಿ ಉತ್ತರವನ್ನು ತರಿಸಿಕೊಂಡಿದ್ದೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಕೇಳಿ, ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಅಧ್ಯಕ್ಷರೇ, ಈ ವರುಣಾ ನಾಲಾ ಮತ್ತು ದೇವರಾಜ ಅರಸ್ ನಾಲಾ ಎರಡಕ್ಕೂ ಅಂದಾಜು ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ ಆದಾಗ ಎಷ್ಟು ಮಂಜೂರಾತಿ ನೀಡಿತ್ತು ? ಈಗ ರಿವೈಸ್ಡ್ ಎಸ್ಟಿಮೇಟ್ ಆದಮೇಲೆ ಎಷ್ಟನ್ನು ಅವರು ಅಂದಾಜು ಮಾಡಿದ್ದಾರೆ ? What is the revised estimate ? What is the amount spent so far ? ಇಷ್ಟರವರೆಗೂ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ? ಮತ್ತು ಇದು ಪೂರ್ಣ ಆಗಬೇಕಾದರೆ ಎಷ್ಟು ಹಣ ಬೇಕಾಗುತ್ತದೆ ? ಎಷ್ಟು ವರ್ಷದಲ್ಲಿ ಇದನ್ನು ಪೂರ್ಣ ಮಾಡುತ್ತಾರೆ ?

SRI G. PUTTASWAMY GOWDA.— Sir, I want a separate notice. ಈಗ ನಮ್ಮಲ್ಲಿರತಕ್ಕಂಥ ಮಾಹಿತಿ ವಿ.ಸಿ. ಕೆನಾಲ್ ಬಗ್ಗೆ. ಅವರು ದೇವರಾಜಅರಸ್ ನಾಲಾ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.— ವರುಣಾ ನಾಲಾ ಮತ್ತು ದೇವರಾಜ ಅರಸ್ ನಾಲಾ ಎರಡು ಒಂದೇನೆ ? ಅಥವಾ ಬೇರೆ ಬೇರೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.— ದೇವರಾಜ ಅರಸ್ ನಾಲಾ ಮತ್ತು ವರುಣಾ ನಾಲಾ ಎರಡೂ ಒಂದೇ. ಆದರೆ ಈಗ ಉತ್ತರ ಕೊಡುತ್ತಿರತಕ್ಕಂಥದ್ದು ವಿ. ಸಿ. ಕೆನಾಲ್‌ಗೆ ಸಂಬಂಧಪಟ್ಟ ಹಾಗೆ ಕೊಡುತ್ತಿದ್ದೇನೆ. ಅಂದರೆ ವಿಶ್ವೇಶ್ವರಯ್ಯ ಕೆನಾಲ್‌ನ ಮಾಡರೇಷನ್ ಬಗ್ಗೆ ಉತ್ತರವನ್ನು ನಾನು ಕೊಡುತ್ತಿದ್ದೇನೆ.

SRI KAGODU THIMMAPPA.— V.C. Canal was named after Devraj Urs Canal.

ಶ್ರೀ ಜಿ. ಪುಟ್ಟಸ್ವಾಮಿಗೌಡ.— ನಾನು ಅದನ್ನೇ ಹೇಳುತ್ತಿದ್ದೇನೆ. ತಾವು ಹೊಸದಾಗಿ ಬಂದಿದ್ದೀರಿ.

ವಿಧಾನ ಸೌಧದ ನಿರ್ವಹಣೆ

೫೨೧. ಶ್ರೀ ರಾಮಲಿಂಗರೆಡ್ಡಿ (ಜಯನಗರ).— ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಧಾನ ಸೌಧದ ದುರಸ್ಥಿಗಾಗಿ ಪ್ರತಿ ವರ್ಷ ಎಷ್ಟು ಹಣವನ್ನು ಖರ್ಚು ಮಾಡಲಾಗುತ್ತಿದೆ (ವಿವರಗಳನ್ನು ನೀಡುವುದು) ;

ಆ) ಕಳೆದ ಮೂರು ವರ್ಷಗಳಿಂದ ವೆಚ್ಚ ಮಾಡಲಾಗಿರುವ ಹಣವೆಷ್ಟು ;

ಇ) ಯಾವ ಯಾವ ಬಾಬ್ತಿಗಾಗಿ ಹಣವನ್ನು ಖರ್ಚು ಮಾಡಲಾಗಿದೆ (ಪ್ರತ್ಯೇಕ ವಿವರಗಳ ಮತ್ತು ಪಾವತಿ ಮಾಡಿದ ಹಣದ ಪೂರ್ಣ ವಿವರಗಳನ್ನು ನೀಡುವುದು);

ಈ) ವಿಧಾನ ಸೌಧದ ಕೆಲವು ಶೌಚಾಲಯಗಳಲ್ಲಿ ಅಳವಡಿಸಿದ್ದ ಟ್ಯಾಪ್‌ಗಳು ಕಾಣೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೆ ;

ಉ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ಮತ್ತು ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕ್ಲಾಸ್ (ಇ) ನಲ್ಲಿ ವಿವರಿಸಿರುವಂತೆ ವಿಧಾನ ಸೌಧದ ರಿಪೇರಿಗಾಗಿ ಸರಾಸರಿ ರೂ.೬.೨೩ ಲಕ್ಷದ ವಾರ್ಷಿಕ ವೆಚ್ಚವನ್ನು ಮಾಡಲಾಗುತ್ತಿದೆ.

ಆ) ಮತ್ತು ಇ) ಕ್ರಮದ ಮೂರು ವರ್ಷಗಳಿಂದ ಅಂದರೆ ೧೯೮೭-೮೮, ೧೯೮೮-೮೯ ಮತ್ತು ೧೯೮೯-೯೦ರ ವರೆಗೆ ಖರ್ಚು ಮಾಡಿರುವ ಒಟ್ಟು ಹಣ ೧೮, ೬೯, ೯೦೮-೦೦ ರೂಪಾಯಿಗಳು. ವಿವರಗಳನ್ನು ಈ ಕೆಳಗೆ ನೀಡಲಾಗಿದೆ:—

		೧೯೮೭-೮೮	೧೯೮೮-೮೯	೧೯೮೯-೯೦
೧)	ದಿನಗೂಲಿ ನೌಕರರ ವೇತನ	೯೬,೦೦೦	೯೬,೦೦೦	೧,೨೬,೦೦೦
೨)	ವಿದ್ಯುಚ್ಛಕ್ತಿ ಉಪಕರಣಗಳ ರಿಪೇರಿ ಹಾಗೂ ಬದಲಾವಣೆಗಳು	೭೧,೦೬೬	೩೬,೧೮೩	೬೪,೫೦೧
೩)	ನೀರು ಸರಬರಾಜು, ಸ್ಯಾನಿಟರಿ ಉಪಕರಣಗಳ ರಿಪೇರಿ ಹಾಗೂ ಬದಲಾವಣೆಗಳು.	೩೦,೮೮೪	೩೪,೨೬೬	೬೮,೨೩೬
೪)	ಸಿವಿಲ್ ಕಾಮಗಾರಿಗಳು ಅಂದರೆ ಸುಣ್ಣ ಬಣ್ಣ ಪಾಲಿಷ್ ಮತ್ತು ಇತರ ಕೆಲಸಗಳು	೨,೮೬,೮೫೫	೫,೩೯,೦೪೬	೩,೩೨,೩೬೪
೫)	ಕ್ಲೀನಿಂಗ್ ಪೌಡರ್, ಬಿಳಿ ಸಿಮೆಂಟು, ಸ್ವೀಪಿಂಗ್ ಹಿಂಜುಸ್ ಮತ್ತು ಕಿಟಕಿ ಬಾಗಿಲುಗಳ ಸಾಮಾಗ್ರಿಗಳು ಮತ್ತು ಇತರೆ	೩೯,೧೬೬	೨೦,೮೬೪	೨೭,೪೪೭
		ರೂ. ೫,೨೫,೦೦೦	೭,೨೬,೩೫೯	೬,೧೮,೫೪೮
			ಒಟ್ಟು	೧೮,೬೯,೯೦೮ ರೂ.ಗಳು

ಈ) ಇಲ್ಲ

ಉ) ಉದ್ಭವಿಸುವುದಿಲ್ಲ